ಈ ಘಟನೆ ಎರಡು ವಿಷಯಗಳತ್ತ ನಮ್ಮ ಗಮನವನ್ನು ಸೆಳೆಯುವಂತಿದೆ; ಒಂದು: ಕರುಣೆಯ ಮಹತ್ವ; ಮತ್ತೊಂದು: ಬಡತನ–ಸಿರಿತನಗಳ ಸಾಪೇಕ್ಷತೆ.

ಕರುಣೆ ಎಂದರೆ ಮತ್ತೊಬ್ಬರ ಕಷ್ಟವನ್ನೋ ಅಸಹಾಯಕತೆಯನ್ನೋ ನೋಡಿ ಕೇವಲ ಮರುಗುವುದಷ್ಟೆ ಅಲ್ಲ; ಅವರನ್ನು ಆ ಸ್ಥಿತಿಯಿಂದ ಕಾಪಾಡಲು ಕ್ರಿಯಾಶೀಲರಾಗಿ ಸ್ಪಂದಿಸುವುದೇ ದಿಟವಾದ 'ಕರುಣೆ' ಎಂದೆನಿಸಿಕೊಳ್ಳುತ್ತದೆ. ರೋಯ್ಕನ್ ತಾನೇ ಬಡತನದಲ್ಲಿದ್ದವ; ಉಟ್ಟ ಬಟ್ಟೆಯಷ್ಟೆ ಅವನ ಆಸ್ತಿ. ಆದರೆ ಅದನ್ನೂ ದಾನವಾಗಿ ಕೊಡುವಷ್ಟು – ಅದೂ ಕಳ್ಳನಿಗೆ–ಅವನು ಕರುಣಾಶೀಲನಾಗಿದ್ದವ. ಸಹಾಯವನ್ನು ಕೋರಿ ನಮ್ಮಲ್ಲಿಗೂ ಕೆಲವರು ಬರಬಹುದು. ಆದರೆ ಆಗ ನಮ್ಮ ಆಲೋಚನೆ ಕರುಣೆಯ ಹಾದಿಯನ್ನು ಹಿಡಿಯುವುದಕ್ಕಿಂತಲೂ ಬುದ್ಧಿವಂತಿಕೆಯ ದಾರಿಯನ್ನು ಹಿಡಿಯುವ ಸಾಧ್ಯತೆಯೇ ಹೆಚ್ಚು. 'ನನ್ನಲ್ಲಿ ಸಾಕಷ್ಟು ಹಣ ಇದ್ದಿದ್ದರೆ ಅವನಿಗೆ ಸಹಾಯ ಮಾಡಬಹುದಿತ್ತು'; 'ನಾನು ಅಧಿಕಾರದಲ್ಲಿದಿದ್ದರೆ ಅವನಿಗೆ ನೆರವಾಗಬಹದಿತ್ತು' – ಹೀಗೆ ಸಾಗುತ್ತದೆ ನಮ್ಮ ಕಾರುಣ್ಯದ ವಿಚಾರಲಹರಿ. ದಿಟವಾಗಿಯೂ ಸಹಾಯ ಮಾಡಲೇಬೇಕೆಂಬ ಮನಸ್ಸು ನಮಗಿದ್ದರೆ ನಾವು ಖಂಡಿತವಾಗಿಯೂ ನಮ್ಮಲ್ಲಿ ಆ ಹೊತ್ತಿಗಿರುವ ಸೌಲಭ್ಯದಿಂದಲೇ ಮಾಡಬಹುದಾಗಿರುತ್ತದೆ. ರಾಯ್ಕನ್ ಅದನ್ನೇ ಮಾಡಿದ್ದು.

ರಾಯ್ಕನ್ ಕೊಟ್ಟ ಬಟ್ಟೆ ಹೊರಗಿನ ಸಂಪತ್ತು; ಆಸ್ತಿ–ಅಂತಸ್ತುಗಳನ್ನು ಪ್ರತಿನಿಧಿಸಿದರೆ, ಅವನು ಕಳ್ಳನಿಗೆ ಕೊಡಬೇಕಿತ್ತೆಂದು ಬಯಸಿದ 'ಚಂದ್ರ' ಅಂತರಂಗದ ಶ್ರೀಮಂತಿಕೆಯನ್ನು ಪ್ರತಿನಿಧಿಸುತ್ತದೆ. ನಾವು ಲೌಕಿಕವಾಗಿ ಎಷ್ಟೇ ಶ್ರೀಮಂತರಾಗಿದ್ದರೂ, ಅಂತರಂಗದ ಶ್ರೀಮಂತಿಕೆ ಇಲ್ಲದಿದ್ದರೆ ನೆಮ್ಮದಿ ಎಂಬುದು ನಮ್ಮ ಪಾಲಿಗೆ ಮರೀಚಿಕೆಯಾಗಿಯೇ ಉಳಿಯುತ್ತದೆಯಷ್ಟೆ. ಹೊರಗಿನ ವಸ್ತುಗಳಲ್ಲಿಯೇ ಸುಖ–ಸಂತೋಷವನ್ನು ಹುಡುಕುವ ತೀವ್ರತೆ ಹೆಚ್ಚಾದಷ್ಟೂ ಒಳಗಿನ ಶಾಂತಿ–ಸಮಾಧಾನಗಳು ದೂರವಾಗುತ್ತಲೇ ಇರುತ್ತವೆ. ಕದಿಯುವ ಮನಸ್ಸು ಸಿದ್ಧವಾಗುವುದೇ ನಮ್ಮ ಮನಸ್ಸು ಬಡತನದಲ್ಲಿದ್ದಾಗ; ನಮ್ಮಲ್ಲಿ ಇರುವ ವಸ್ತುಗಳು ಸಂತೋಷವನ್ನು ಕೊಡಲು ವಿಫಲವಾದಾಗ. ಡಿವಿಜಿಯವರ ಮರುಳಮುನಿಯನ ಕಗ್ಗದ ಪದ್ಯವೊಂದು ಇಲ್ಲಿ ಮನನೀಯ:

ಬಡವನಾರ್ ? ಮಡದಿಯೊಲವಿನ ಸವಿಯನರಿಯದವನು |
ಹುಡುಗರಾಟದಿ ಬೆರೆತು ನಗಲರಿಯದವನು ||
ಉಡುರಾಗನೋಲಗದಿ ಕುಳಿತು ಮೈಮರೆಯದವನು |
ಬಡಮನಸೆ ಬಡತನವೊ –ಮರುಳ ಮುನಿಯ ||

ಜೀವನದ ಸಣ್ಣ ಸಣ್ಣ ವಿವರಗಳಲ್ಲಿ, ನಾವು ಕ್ಷುಲ್ಲಕ ಎಂದು ಉಪೇಕ್ಷಿಸುವ ಸಂಗತಿಗಳಲ್ಲಿ ನಿಜವಾದ ಸಂತೋಷ, ನೆಮ್ಮದಿಗಳು ಇರುತ್ತವೆ. ಆದರೆ ನಾವು ಇರುವುದನ್ನು ಬಿಟ್ಟು, ಇಲ್ಲದವುಗಳಲ್ಲಿ ಸುಖವನ್ನು ಹುಡುಕುತ್ತಿರುತ್ತೇವೆ. ಅಂಥವರ ಮನಸ್ಸನ್ನೇ ಡಿವಿಜಿಯವರು ಬಡತನ ಎಂದಿರುವುದು – 'ಬಡಮನಸ್ಸೇ ಬಡತನ'. ಮಕ್ಕಳ ನಗುವಿನಲ್ಲಿ, ಚಂದ್ರನ ಬೆಳದಿಂಗಳಲ್ಲಿ, ಮಡದಿಯ ಒಲವಿನ ನುಡಿಯಲ್ಲಿ ನಲಿವನ್ನು ಕಾಣಲಾರದವದವನೇ ನಿಜವಾದ ಬಡವ. ನಾವು ಗಮನಿಸದೇ ಇರುವ, ಆದರೆ ನಮ್ಮ ಸುತ್ತಮುತ್ತಲ್ಲಿ ಸಹಜವಾಗಿರುವ ಎಷ್ಟೋ ವಿವರಗಳು ನಮಗೆ ಸಂತೋಷವನ್ನು ಕೊಡಬಲ್ಲವವಾಗಿರುತ್ತವೆ. ಅಂಥವಕ್ಕೆ ಸ್ಪಂದಿಸುವ ಸಹೃದಯತೆ ನಮ್ಮದಾಗಬೇಕಷ್ಟೆ.